# ಮಕ್ಕಳನ್ನು ಕಾಡುವ ರುಬೆಲ್ಲ ವೈರಸ್




ಮಕ್ಕಳಿಗೆ ಸೋಂಕು ತಗುಲದಂತೆ ಲಸಿಕೆ ಹಾಕಿಸಿಕೊಳ್ಳುವುದು ಅಗತ್ಯ. ಲಸಿಕೆ ಹಾಕಿಸಿಕೊಳ್ಳದೇ ಇರುವ ಮಕ್ಕಳನ್ನು ಬೆಂಬಿಡದೇ ಕಾಡುತ್ತದೆ ರುಬೆಲ್ಲ ಸೋಂಕು.

★ ಡಾ. ಕರವೀರಪ್ರಭು ಕ್ಯಾಲಕೊಂಡ

ರುಬೆಲ್ಲ ಮಕ್ಕಳನ್ನು ಕಾಡುವ ತೀವ್ರ ಸ್ವರೂಪದ ಸೋಂಕು. ಇದಕ್ಕೆ 'ಜರ್ಮನ್ ದಡಾರ' ಎಂದೂ ಹೆಸರಿದೆ. ಇದರ ಹಾವಳಿ ಪ್ರಪಂಚದೆಲ್ಲೆಡೆಯಿದ್ದು, ಲಸಿಕೆಯಿಂದ ವಂಚಿತರಾದ ಮಕ್ಕಳನ್ನು ಕಂಡರೆ ಹಿರಿ ಹಿರಿ ಹಿಗ್ಗುತ್ತದೆ. 6–8 ವರ್ಷಗಳಿಗೊಮ್ಮೆ ಸಾಂಕ್ರಾಮಿಕ ರೂಪ ತಾಳಿ ಗುರುಗುಡುಗುತ್ತದೆ. ಮೂರು ದಿನಗಳ ಸೌಮ್ಯ ಜ್ವರ, ಬೆವರುಸಾಲೆಯಂತಹ ಗುಳ್ಳೆಗಳು, ನಂತರ ಹಾಲ್ರಸ ಗ್ರಂಥಿಗಳ ಊತದಲ್ಲಿ ಅಂತ್ಯಗೊಳ್ಳುವ ಈ ಕಾಯಿಲೆಗೆ 'ಮೂರು ದಿನಗಳ ಜ್ವರ' ಎಂದೂ ಕರೆಯುತ್ತಾರೆ.

ರುಬೆಲ್ಲ ತೊಗಾವೈರಸ್ ಕುಟುಂಬಕ್ಕೆ ಸೇರಿದ ಆರ್.ಎನ್.ಎ. ವೈರಸ್‌ದಿಂದ ಉಂಟಾಗುತ್ತದೆ. ಈ ವೈರಸ್‌ನ್ನು ಸೋಂಕಿಗೀಡಾದವರ ಗಂಟಲು, ಗಂಟಲು ಅಂಗಳ, ರಕ್ತ ಮತ್ತು ಮೂತ್ರಗಳಿಂದ ಪ್ರತ್ಯೇಕಿಸಲಾಗಿದೆ. ರೋಗಿಗಳು, ರೋಗ ಪೂರ್ವದ ಲಕ್ಷಣ ಹೊಂದಿದವರು ಮಾತ್ರ ಈ ರೋಗದ ಸೋಂಕಿನ ಮೂಲ. ರೋಗವಾಹಕರು ಇರದೇ ಇರುವುದು ಇದರ ವೈಶಿಷ್ಟ್ಯ. ಸಂಜಾತ ರುಬೆಲ್ಲದಿಂದ ಹುಟ್ಟಿದ ಮಕ್ಕಳು ಹಲವಾರು ತಿಂಗಳು ಈ ರೋಗಾಣುಗಳನ್ನು ವಿಸರ್ಜಿಸುತ್ತಿರುತ್ತಾರೆ. ಇದು ದಡಾರದಷ್ಟು ಬಲಿಷ್ಠ ಸೋಂಕು ಗುಣವನ್ನು ಹೊಂದಿರುವುದಿಲ್ಲ. ನಿಖರವಾದ ಸೋಂಕಿನ ಅವಧಿ ನಿರ್ಧಾರವಾಗಿಲ್ಲವಾದರೂ, ರೋಗ ಲಕ್ಷಣಗಳು ಕಾಣಿಸಿಕೊಳ್ಳುವ ಒಂದು ವಾರ ಮೊದಲು ಮತ್ತು ಬೆವರುಸಾಲೆಯಂತಹ ಗುಳ್ಳೆಗಳು ಎದ್ದು ನಂತರ ಒಂದು ವಾರದವರೆಗೆ ಬೇರೆಯವರಿಗೆ ಸೋಂಕಿನ ಉಡುಗೊರೆ ದೊರೆಯಬಹುದು. ಗುಳ್ಳೆಗಳು ಏಳುವ ಸಂದರ್ಭದಲ್ಲಿ ಮಾತ್ರ ಸೋಂಕು ನೀಡುವ ಶಕ್ತಿ ಉಗ್ರ ಸ್ವರೂಪದ್ದಾಗಿರುತ್ತದೆ.



ಈ ರೋಗವು ಸಾಮಾನ್ಯವಾಗಿ ಚಳಿಗಾಲದ ಅಂತ್ಯ ಹಾಗೂ ಬೇಸಿಗೆಯ ಆರಂಭದಲ್ಲಿ ಹರಡುತ್ತದೆ. ಹೆಚ್ಚಾಗಿ 3–10 ವರ್ಷದೊಳಗಿನ ಮಕ್ಕಳು ಈ ರೋಗಕ್ಕೊಳಗಾಗುತ್ತಾರೆ. ಮೂಗು ಮತ್ತು ಗಂಟಲಿನಿಂದ ವಿಸರ್ಜಿತವಾಗುವ ತುಂತುರ ಹನಿಗಳ ಮೂಲಕ ರೋಗವು ಒಬ್ಬರಿಂದೊಬ್ಬರಿಗೆ ಹರಡುತ್ತದೆ. ಅಲ್ಲದೆ ರುಬೆಲ್ಲ ರೋಗಾಣುಗಳು ತಾಯಿಂದ ಮಗುವಿಗೆ 'ಮಾಸು' ಮೂಲಕ ಹರಡಿ, ಅನೇಕ ಆಜನ್ಮ ದೋಷಗಳನ್ನುಂಟು ಮಾಡುತ್ತದೆ. ಒಂದು ಬಾರಿ ರೋಗ ಉಂಟಾಯಿತೆಂದರೆ ಅದರಿಂದ ಬರುವ ರೋಗ ನಿರೋಧಕ ಶಕ್ತಿ ಜೀವನಪರ್ಯಂತ ಇರುತ್ತದೆ. ಈ ರೋಗದಿಂದ ರಕ್ಷಣೆ ಪಡೆದ ಗರ್ಭಿಣಿಗೆ ಹುಟ್ಟಿದ ಮಗು ಮೊದಲ ಆರು ತಿಂಗಳವರೆಗೆ ತಾಯಿಯಿಂದ ಉಡುಗೊರೆಯಾಗಿ ಪಡೆದ ಪ್ರತಿಕಾಯಗಳಿಂದಾಗಿ ರಕ್ಷಣೆಯನ್ನು ಪಡೆಯುತ್ತದೆ.

## ರೋಗದ ಲಕ್ಷಣಗಳು

ರೋಗ ಸರಾಸರಿ ಸುಮಾರು 18 ದಿನಗಳಷ್ಟಿರುತ್ತದೆ. ಶೇ. 50–65 ರಷ್ಟು ರೋಗಿಗಳು ಯಾವುದೇ ಲಕ್ಷಣಗಳನ್ನು ಪ್ರಕಟಿಸುವುದಿಲ್ಲ. ರೋಗದ ಲಕ್ಷಣಗಳು ಪ್ರಕಟವಾಗುವ ಮೊದಲು ನೆಗಡಿ, ಗಂಟಲು ನೋವು, ಕೆರೆತ, ಸೌಮ್ಯಜ್ವರ ಕಾಣಿಸಿಕೊಳ್ಳುತ್ತವೆ. ಇವು ಪಾಲಕರ ಗಮನವನ್ನು ಸಾಮಾನ್ಯವಾಗಿ ಸೆಳೆಯುವುದಿಲ್ಲ. ಹಾಲ್ರಸ ಗ್ರಂಥಿಗಳ ಊತ ಇನ್ನೊಂದು ಲಕ್ಷಣ. ಇದು ಎಲ್ಲರಲ್ಲೂ ಕಾಣಿಸಿಕೊಳ್ಳಬೇಕೆಂದಿಲ್ಲ. ಕೆಲವರಲ್ಲಿ ಬೆವರುಸಾಲೆಯಂತಹ ಗುಳ್ಳೆಗಳು ಮಾಯವಾದ ನಂತರವೂ ಹತ್ತು ಹದಿನಾಲ್ಕು ದಿನಗಳ ಕಾಲ ಅವು ಊದಿಕೊಂಡಿರುತ್ತವೆ.

ರೋಗ ಪೂರ್ವ ಲಕ್ಷಣಗಳು ಕಾಣಿಸಿಕೊಂಡ 24 ಗಂಟೆಗಳೊಳಗೆ ಮುಖದ ಮೇಲೆ ನಸುಗೆಂಪು ಬಣ್ಣದ ಗುಳ್ಳೆಗಳು ತೋರಬಹುದು. ಇವು ಗಾತ್ರದಲ್ಲಿ ತೀರಾ ಚಿಕ್ಕವಾಗಿದ್ದು, ಅಲ್ಲಲ್ಲಿ ಚದುರಿಕೊಂಡಿರುತ್ತವೆ. ಕಂಜೆಕ್ಟಿವಿಟಿಸ್ ಕಾಣಿಸಿಕೊಳ್ಳಬಹುದು. ಗುಳ್ಳೆಗಳು ಬಹು ಬೇಗನೆ ದೇಹ ಮತ್ತು ಕೈ ಕಾಲುಗಳಿಗೆ ಹರಡುತ್ತವೆ. ಈ ಹೊತ್ತಿಗೆ ಮುಖದ ಮೇಲಿನ ಗುಳ್ಳೆಗಳು ಮಾಯವಾಗಿರುತ್ತವೆ. ಇವು ಬೇಗನೆ ಹರಡಿ ಬೇಗನೆ ಕಾಣೆಯಾಗುವವು. ಶೇ. 25 ರಷ್ಟು ರೋಗಿಗಳಲ್ಲಿ ಗುಳ್ಳೆಗಳೇ ಗೋಚರಿಸುವುದಿಲ್ಲ.

## ದುಷ್ಪರಿಣಾಮಗಳು

* ಅಪರೂಪಕ್ಕೆ ಕೀಲುನೋವು ಉಂಟಾಗಬಹುದು. ಇದು ಹಲವಾರು ಕೀಲುಗಳಲ್ಲಿ ಕಾಣಿಸಿಕೊಳ್ಳಬಹುದು. ಸಾಮಾನ್ಯವಾಗಿ ಯುವಕರಲ್ಲಿ, ಅದರಲ್ಲೂ ಮಹಿಳೆಯರಲ್ಲಿ ಹೆಚ್ಚಾಗಿ ಕಂಡುಬರುವುದು.
* ಬಹಳ ಅಪರೂಪವಾಗಿ ಮಿದುಳು ಪೊರೆಯುರಿತ ಉಂಟಾಗಬಹುದು.

## ಚಿಕಿತ್ಸೆ

ಚೆನ್ನಾಗಿ ಗಾಳಿಯಾಡುತ್ತಿರುವ ಬೆಳಕಿರುವ ಕೋಣೆಯಲ್ಲಿ ಆರೈಕೆ ಮಾಡಬೇಕು. ಹೆಚ್ಚು ದ್ರವರೂಪೀ ಆಹಾರವನ್ನು ಕೊಡಬೇಕು. ಜ್ವರ ಶಮನ ಗುಳಿಗೆಗಳನ್ನು ನೀಡಬೇಕು. ಈ ರೋಗದ ಪ್ರಾರಂಭದಲ್ಲಿ ಜೀವಿರೋಧಕಗಳನ್ನು ಕೊಟ್ಟರೆ ಅದು ರೋಗದ ಅವಧಿಯನ್ನು ಕಡಿಮೆ ಮಾಡುವುದು. ತೊಡಕು ತೊಂದರೆಗಳಿಗೆ ಕಡಿವಾಣ ಹಾಕುವುದು.

ಗರ್ಭಾವಧಿಯ 3–6 ತಿಂಗಳಲ್ಲಿ ರೋಗಕ್ಕೊಳಗಾದರೆ, ಮಗುವಿನಲ್ಲಿ ಕಿವುಡುತನ ಸಾಮಾನ್ಯ. ಗರ್ಭಿಣಿಯು ಹದಿನಾರು ವಾರಗಳ ನಂತರ ರೋಗಕ್ಕೊಳಗಾದರೆ ಮಗುವಿಗೆ ಯಾವುದೇ ತೊಂದರೆಯಾಗುವುದಿಲ್ಲ. ಮೊದಲ ಮೂರು ತಿಂಗಳಲ್ಲಿ ಗರ್ಭಿಣಿಯು ರೋಗಕ್ಕೊಳಗಾದರೆ, ರೋಗವು ತೀವ್ರವಾಗಿದ್ದಲ್ಲಿ ಗರ್ಭಪಾತ ಆಗಬಹುದು. ಇಲ್ಲವೇ ಮಗುವು ಗರ್ಭದಲ್ಲೇ ಅಸು ನೀಗಬಹುದು. ■